**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ280/2016**

ಅಸಾ:3 (ಚಾಸಾ-2)

| | |
|---|---|
| ಹೆಸರು | ಬಸಪ್ಪ ಕರೆಣ್ಣಿ |
| ತಂದೆಯ /ಗಂಡನ ಹೆಸರು | ಚಂದ್ರಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಚಿಮ್ಮಡ |

ದಿನಾಂಕ 06-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ-1, 3, 4 ಮತ್ತು ಆರೋಪಿತರ ಪರಿಚಯ ಇದೆ . ದಿನಾಂಕ 01-11-2015 ರಂದು ಆರೋಪಿತರ ಮತ್ತು ಚಾಸಾ-1 ರವರ ನಡುವೆ ಜಗಳವಾಗಿತ್ತು. ಯಾವ ಕಾರಣಕ್ಕೆ ಜಗಳವಾಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. ಮರು ದಿನ ನಾನು ಸ್ಥಳಕ್ಕೆ ಹೋದಾಗ ಜಗಳದ ಕುರಿತಾಗಿ ಪೋಲಿಸರು ಪಂಚನಾಮೆ ಮಾಡಿ, ಪೋಟೋ ತೆಗೆದು ನನ್ನ ಸಹಿ ಪಡೆದಿರುತ್ತಾರೆ . ಆಗ ಚಾಸಾ-3, 7 ಮತ್ತು 8 ರವರು ಹಾಜರು ಇದ್ದರು.

ಈ ಹಂತದಲ್ಲಿ ಸಾಕ್ಷಿಗೆ 01 ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆ ಸ್ಥಳ ಪಂಚನಾಮೆ ಇದ್ದು ಅದನ್ನು ನಿಪಿ-5 ಎಂದು, , ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ- 5 ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ 03 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ರಿಂದ 4 ಎಂದು ಗುರುತಿಸಲಾಗಿದೆ.

**ಪಾಟೀಸವಾಲು: ಆರೋಪಿ ಪರ ಶ್ರೀ ಎಂ ಜಿ ಕೆ ವಕೀಲರಿಂದ:-**

ಚಾಸಾ-1 ರವರು ನಮ್ಮ ಓಣೆಯಲ್ಲಿ ವಾಸ ಇರುತ್ತಾರೆ. ಅವರ ಜಾಗೆಯ ಚಕಬಂದಿ ಹೇಳಲು ಬರುವದಿಲ್ಲ. ನಿಪಿ-5 ರಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿರುವದಿಲ್ಲ. ನಾನು ನಿಪಿ-5 ಕ್ಕೆ ಮಾಹಿತಿ ಕೊಟ್ಟು ಬರೆಸಿರುವದಿಲ್ಲ ಎಂದರೆ ಸರಿ. ನಿಪಿ-2 ರಿಂದ 4 ಪೋಟೋಗಳನ್ನು ಯಾರು ತೆಗೆದಿರುತ್ತಾರೆಂದು ಅವರ ಹೆಸರು ಹೇಳಲು ಬರುವದಿಲ್ಲ. ಪೋಲಿಸರು ಪೋಟೋ ಬೇಕೆಂದು ಕೇಳಿದಾಗ ನಾನು ಬಂದು ನಿಂತಿರುತ್ತೇನೆ ಎಂದರೆ ಸರಿ. ಪೋಲಿಸರ ಮಾತು ಕೇಳಿ ನಿಪಿ-5 ಕ್ಕೆ ಸಹಿ ಮಾಡಿರುತ್ತೇನೆ

ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.

<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>

**<u>ಸಿ.ಸಿ.ನಂ.280/2016</u>**

ಅಸಾಃ 2 (ಚಾಸಾ-5)

| | |
|---|---|
| ಹೆಸರು | ಶಾಂತವ್ವ ತೇಲಿ |
| ತಂದೆಯ /ಗಂಡನ ಹೆಸರು | ರಾಜು |
| ವಯಸ್ಸು | 25 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಚಿಮ್ಮಡ |

ದಿನಾಂಕ 06-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-</u>**

ಚಾಸಾ-1 ಮತ್ತು 4 ರವರು ನನ್ನ ತಾಯಿ ಮತ್ತು ತಂದೆ. ಚಾಸಾ-6 ನನ್ನ ಗಂಡ. ನನಗೆ ಚಾಸಾ-7 ರಿಂದ 9 ಮತ್ತು ಆರೋಪಿತರ ಪರಿಚಯ ಇದೆ. ಸುಮಾರು 08-09 ವರ್ಷಗಳ ಹಿಂದೆ ಮನೆ ಕಟ್ಟಿಸುವ ಸಲುವಾಗಿ ಆರೋಪಿತರ ಮತ್ತು ನನ್ನ ತಂದೆ ತಾಯಿ ನಡುವೆ ಜಗಳವಾಗಿರುತ್ತದೆ. ಆಗ ನನ್ನ ತಾಯಿಗೆ 4 ನೇ ಆರೋಪಿ ಕೈನ್ನು ಎಳೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ಬಿಡಿಸಲು ಹೋದ ನನ್ನ ತಂದೆ ಮತ್ತು ನನಗೆ 8 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದು ನನ್ನ ಕೈಯನ್ನು ತಿರುವಿರುತ್ತಾರೆ. ಮನೆಯಿಂದ ನನ್ನನ್ನು ಬಿಡಿಸಲು ಬಂದ ನನ್ನ ಗಂಡನಾದ ಚಾಸಾ-6 ರವರನ್ನು 1, 2 ಮತ್ತು 8 ನೇ ಆರೋಪಿತರು ಕೂಡಿ ಅವರಿಗೆ ಬಡಿದಿರುತ್ತಾರೆ. ನಂತರ ಚಾಸಾ-7 ಮತ್ತು 8 ಮತ್ತು ಇತರರು ಜಗಳ ಬಿಡಿಸಿರುತ್ತಾರೆ. ಠಾಣೆಯಲ್ಲಿ ದೂರನ್ನು ನೀಡಲು ಹೋದರೆ ಕೊಲ್ಲುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಮರು ದಿನ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ. ಈ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿನಾಂಕ 31-10-2015 ರಂದು ಸಂಜೆ 07 ಗಂಟೆಗೆ ಘಟನೆಯಾಗಿರುತ್ತದೆ ಎಂದರೆ ದಿನಾಂಕ ನನಗೆ ನೆನಪಿರುವದಿಲ್ಲ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಜಿ ಕೆ ವಕೀಲರಿಂದ:-</u>**

ನನ್ನ ಮದುವೆ ಅಂದಾಜು 17-18 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಗಂಡನ ಊರು ಹಳಿಂಗಳಿ.

ನಾನು ಮದುವೆ ಆದಾಗಿನಿಂದ ಹಳಿಂಗಳಿಯಲ್ಲಿ ವಾಸ ಇದ್ದು ಚಿಮ್ಮಡದಲ್ಲಿ ವಾಸ ಇರುವದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ಗಂಡು ಮಕ್ಕಳು ಇರುವದಿಲ್ಲ, ಅವರನ್ನು ನೋಡಿಕೊಳ್ಳಲು ನಾನು ತಂದೆ ತಾಯಿ ಮನೆಯಲ್ಲಿ ವಾಸ ಇರುತ್ತೇನೆ. ಹೀಗೆಂದು ಪೋಲಿಸರ ಮುಂದೆ ಹೇಳಿರುವದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಇರುವದಿಲ್ಲ ಎಂದರೆ ಸರಿಯಲ್ಲ. ಜಾಗೆ ಕುರಿತಾಗಿ ಮೊದಲಿಂದ ನನ್ನ ತಂದೆ ಮತ್ತು ಆರೋಪಿತರ ನಡುವೆ ವ್ಯಾಜ್ಯ ಇತ್ತು ಎಂದರೆ ಸರಿ. ಕೇಸನ್ನು ನಂಬರ ನನ್ನ ತಂದೆ ಹೇಳಿದ್ದು ನಾನು ಶಾಲೆ ಕಲಿಯದ ಕಾರಣ ಹೇಳಿರುವದಿಲ್ಲ. ಘಟನೆ ಸಂಜೆ ಸುಮಾರು 06-30 ಕ್ಕೆ ಆಗಿರುತ್ತದೆ ಲೈಟ್ ಹೋದ ನಂತರ ಆರೋಪಿತರು ಬಂದು ಬಡಿದಿರುತ್ತಾರೆ. ಆರೋಪಿತರು ಬಂದು ನಮಗೆ ಬಡಿದು ನನ್ನ ಕೈಯನ್ನು ತಿರುವಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಲೈಟ ಹೋದ ನಂತರ ಎಂದು ಹೇಳುತ್ತಿರುದರಿಂದ ಯಾರು ಬಡಿದಿರುತ್ತಾರೆ ಎಂದು ಹೇಳಲು ಬರುವದಿಲ್ಲ ಎಂದರೆ ಸರಿಯಲ್ಲ. 04 ನೇ ಆರೋಪಿ ನನ್ನ ತಾಯಿಯ ಕೈಯನ್ನು ತಿರುವಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ 8 ನೇ ಆರೋಪಿ ನನ್ನ ಕೈಯನ್ನು ತಿರುವಿದರು ಮತ್ತು ನನ್ನ ತಂದೆಗೆ ಮತ್ತು ನನಗೆ ಹೊಡೆದಿರುತ್ತಾರೆಂದು ಮತ್ತು ನಮಗೆ ಜೀವ ಬೆದರಿಕ ಹಾಕಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಸಿವಿಲ್ ವ್ಯಾಜ್ಯಗಳು ಇದ್ದು ಅದರ ಅನುಕೂಲಕ್ಕಾಗಿ ಆರೋಪಿತರ ವಿರುದ್ದ ನನ್ನ ತಾಯಿ ಕೊಟ್ಟ ಸುಳ್ಳು ಪಿರ್ಯಾದಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/

ದಿವಾಣಿ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ. ದಂ., ಬನಹಟ್ಟಿ.**